ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಧಾರವಾಡ

ಎ.ಡಿ.ಆರ್. ಕಟ್ಟಡ, ದಿವಾಣಿ ನ್ಯಾಯಾಲಯಗಳ ಆವರಣ, ಪಿ.ಬಿ. ರಸ್ತೆ, ಧಾರವಾಡ – 580001

DISTRICT LEGAL SERVICES AUTHORITY, DHARWAD

ADR Building, Civil Court Premises, B.P.Road, Dharwad – 580 001.

Telephone: 0836 – 2740128 **E-mail ID:** dlsa.dwd2@gmail.com,

No.: DLSA Dwd: ೧೨೯/2025 ದಿನಾಂಕ: 13/10/2025

ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಧಾರವಾಡ ಜಿಲ್ಲೆ, ಧಾರವಾಡ – ಇವರಿಗೆ

ವಿಷಯ: ಧಾರವಾಡ ಜಿಲ್ಲಾ ಮಧ್ಯಸ್ಥಿಕೆ ಕೇಂದ್ರ ಹಾಗೂ ತಾಲ್ಲೂಕು ಮಧ್ಯಸ್ಥಿಕೆ ಕೇಂದ್ರಗಳಾದ ಹುಬ್ಬಳ್ಳಿ, ಕುಂದಗೋಳ, ಕಲಘಟಗಿ ಹಾಗೂ ನವಲಗುಂದಗಳಲ್ಲಿ ಮೂರು ವರ್ಷಗಳ ಅವಧಿಗೆ ಮಧ್ಯಸ್ಥಿಕೆಗಾರರನ್ನು ನೇಮಕ ಮಾಡಲು ಪ್ರಕಟಣೆಯನ್ನು ಹೊರಡಿಸಿ ಅರ್ಜಿಯನ್ನು ಆಹ್ವಾನಿಸುವ ಕುರಿತು ಜಿಲ್ಲಾ ನ್ಯಾಯಾಲಯದ ಅಂರ್ತಜಾಲದಲ್ಲಿ ವೆಬ್‌ಹೊಸ್ಟ ಮಾಡುವ ಕುರಿತು.

ಉಲ್ಲೇಖ: 1. ಕ.ರಾ.ಕಾ.ಸೇವೆಗಳ ಪ್ರಾಧಿಕಾರದ ಪತ್ರ ಸಂಖ್ಯೆ:ಕ.ರಾ.ಕಾ.ಸೇ.ಪ್ರಾ/01/MED/2024, ದಿನಾಂಕ: 20–09–2025

2. ಜಿ.ಕಾ.ಸೇ.ಪ್ರಾಧಿಕಾರದ ಪತ್ರ ಸಂಖ್ಯೆ: 24 /2025 ದಿನಾಂಕ: 13 /10/2025

3. Mediation Rules, 2015 (MCPC)

******

ಮೇಲಿನ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಜಿಲ್ಲಾ ಮಧ್ಯಸ್ಥಿಕೆ ಕೇಂದ್ರ ಹಾಗೂ ತಾಲ್ಲೂಕು ಮಧ್ಯಸ್ಥಿಕೆ ಕೇಂದ್ರಗಳಾದ ಹುಬ್ಬಳ್ಳಿ, ಕುಂದಗೋಳ, ಕಲಘಟಗಿ ಹಾಗೂ ನವಲಗುಂದಗಳಲ್ಲಿ ಸೇವೆ ಸಲ್ಲಿಸಲು ಅರ್ಜಿಯನ್ನು ಆಹ್ವಾನಿಸುವ ಕುರಿತು ಉಲ್ಲೇಖ ಪತ್ರ 1ರನ್ವಯ ಗೌರವಾನ್ವಿತ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರುರವರ ನಿರ್ದೇಶನದ ಮೇರೆಗೆ 3 ವರ್ಷಗಳ ಅವಧಿಗೆ ಹೊಸದಾಗಿ ಮಧ್ಯಸ್ಥಿಕೆದಾರರನ್ನು ನೇಮಕ ಮಾಡಿಕೊಳ್ಳಬೇಕಾಗಿರುತ್ತದೆ.

ಆದ್ದರಿಂದ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ ಸದರಿ ಮಾಹಿತಿಯನ್ನು ಜಿಲ್ಲಾ ನ್ಯಾಯಾಲಯದ ಅಂರ್ತಜಾಲದಲ್ಲಿ ವೆಬ್‌ಹೊಸ್ಟ ಮಾಡುವಂತೆ ಈ ಮೂಲಕ ಗೌರವಾನ್ವಿತರನ್ನು ಕೋರಲಾಗಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ,

14-10-25

ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ
ಧಾರವಾಡ.

MEMBER SECRETARY
District Legal Services Authority
Dharwad

ಮಾಹಿತಿಗಾಗಿ:–

ಸಾಪ್ಟವೇರ ಟೆಕ್ನಿಸಿಯನ್, ಜಿಲ್ಲಾ ನ್ಯಾಯಾಲಯ, ಧಾರವಾಡ–ಇವರಿಗೆ

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಧಾರವಾಡ

ಎ.ಡಿ.ಆರ್. ಕಟ್ಟಡ, ದಿವಾಣಿ ನ್ಯಾಯಾಲಯಗಳ ಆವರಣ, ಪಿ.ಬಿ. ರಸ್ತೆ, ಧಾರವಾಡ – 580001

DISTRICT LEGAL SERVICES AUTHORITY, DHARWAD

ADR Building, Civil Court Premises, B.P.Road, Dharwad – 580 001.

Telephone: 0836 – 2740128 **E-mail ID:** dlsa.dwd2@gmail.com,

No.: DLSA Dwd: 936/2025 ದಿನಾಂಕ: 13/10/2025

ಪ್ರಕಟಣೆ

ವಿಷಯ: ಧಾರವಾಡ ಜಿಲ್ಲಾ ಮಧ್ಯಸ್ಥಿಕೆ ಕೇಂದ್ರ ಹಾಗೂ ತಾಲ್ಲೂಕು ಮಧ್ಯಸ್ಥಿಕೆ ಕೇಂದ್ರಗಳಾದ ಹುಬ್ಬಳ್ಳಿ, ಕುಂದಗೋಳ, ಕಲಘಟಗಿ ಹಾಗೂ ನವಲಗುಂದಗಳಲ್ಲಿ ಮೂರು ವರ್ಷಗಳ ಅವಧಿಗೆ ಮಧ್ಯಸ್ಥಿಕೆಗಾರರನ್ನು ನೇಮಕ ಮಾಡಲು ಪ್ರಕಟಣೆಯನ್ನು ಹೊರಡಿಸಿ ಅರ್ಜಿಯನ್ನು ಆಹ್ವಾನಿಸುವ ಕುರಿತು.

ಉಲ್ಲೇಖ: 1. ಕ.ರಾ.ಕಾ.ಸೇವೆಗಳ ಪ್ರಾಧಿಕಾರದ ಪತ್ರ ಸಂಖ್ಯೆ: ಕ.ರಾ.ಕಾ.ಸೇ.ಪ್ರಾ/01/MED/2024, ದಿನಾಂಕ: 20–09–2025

2. Mediation Rules, 2015 (MCPC)

* * * * *

ಮೇಲ್ಕಾಣಿಸಿದ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಉಲ್ಲೇಖ ಪತ್ರ 01 ರನ್ವಯ ಗೌರವಾನ್ವಿತ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ 03 ವರ್ಷಗಳ ಅವಧಿಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಧಾರವಾಡದಲ್ಲಿ ಮಧ್ಯಸ್ಥಿಕೆಗಾರರನ್ನು ನೇಮಿಸಿಕೊಳ್ಳಲು ನಿರ್ದೇಶನ ನೀಡಿರುತ್ತಾರೆ. ಆ ಕಾರಣ ಜಿಲ್ಲಾ ಮಧ್ಯಸ್ಥಿಕೆ ಕೇಂದ್ರ ಧಾರವಾಡ ಹಾಗೂ ತಾಲೂಕು ಮಧ್ಯಸ್ಥಿಕೆ ಕೇಂದ್ರಗಳಾದ ಹುಬ್ಬಳ್ಳಿ, ಕುಂದಗೋಳ, ಕಲಘಟಗಿ ಹಾಗೂ ನವಲಗುಂದಗಳಲ್ಲಿ ಹೊಸದಾಗಿ ಮಧ್ಯಸ್ಥಿಕೆಗಾರರನ್ನು ನೇಮಕಾತಿ ಮಾಡಬೇಕಾಗಿರುತ್ತದೆ.

ಆದ್ದರಿಂದ, ಮುಖ್ಯವಾಗಿ ಸೇವಾ ಮನೋಭಾವನೆಯನ್ನು ಹೊಂದಿರುವ, ಅಪರಾಧ ಪ್ರಕರಣಗಳು, ಸಿವಿಲ್ ಪ್ರಕರಣಗಳು, ವೈವಾಹಿಕ ಪ್ರಕರಣಗಳು, ಚೆಕ್ ಬೌನ್ಸ್ ಪ್ರಕರಣಗಳು, ವಾಣಿಜ್ಯ ವಿವಾದಗಳನ್ನು ನಡೆಸಿದ ಅನುಭವ ಹೊಂದಿದ 15 ವರ್ಷಗಳ ವಕೀಲ ವೃತ್ತಿಯನ್ನು ಪೂರೈಸಿದ ವಕೀಲರು, ನಿವೃತ್ತ ನ್ಯಾಯಾಧೀಶರು, ನಿವೃತ್ತ ಸೈನಿಕರು, ನಿವೃತ್ತ ಇನ್ಸೂರೆನ್ಸ್ ಕಂಪನಿಯ ಹಿರಿಯ ಅಧಿಕಾರಿಗಳು, ನಿವೃತ್ತ ಬ್ಯಾಂಕ್ ಅಧಿಕಾರಿಗಳು, ನಿವೃತ್ತ ಪ್ರಾಧ್ಯಾಪಕರು ಹಾಗೂ ಶಿಕ್ಷಕರು, ವೈದ್ಯರಿಂದ ಅರ್ಜಿಯನ್ನು ಆಹ್ವಾನಿಸಲು ಹಾಗೂ ಸದರಿ ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿ (ದ್ವಿಪ್ರತಿಯಲ್ಲಿ) ದಿನಾಂಕ:28/10/2025 ರ ಸಾಯಂಕಾಲ 5.30 ಗಂಟೆಯ ಒಳಗಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಥವಾ ತಾಲೂಕು

ಕಾನೂನು ಸೇವಾ ಸಮಿತಿಗಳ ಕಛೇರಿಯಲ್ಲಿ ಅರ್ಜಿ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ನಿಗದಿತ ನಮೂನೆಯನ್ನು ಈ ಪ್ರಕಟಣೆಯ ಜೊತೆಯಲ್ಲಿ ಲಗತ್ತಿಸಿದೆ.

ನಿಗದಿತ ದಿನಾಂಕ ಮತ್ತು ಸಮಯದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವದಿಲ್ಲ.

(ಶ್ರೀಮತಿ ಬಿ. ಎಸ್. ಭಾರತಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ಅಧ್ಯಕ್ಷರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ಧಾರವಾಡ.

CHAIRMAN
District Legal Services Authority
Dharwad

ಪ್ರತಿಯನ್ನು:

1. ಪ್ರಧಾನ ಜಿಲ್ಲಾ & ಸತ್ರ ನ್ಯಾಯಾಲಯ ಧಾರವಾಡದ ನೋಟಿಸ್ ಬೋರ್ಡ್‌ಗೆ.
2. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಧಾರವಾಡದ ನೋಟಿಸ್ ಬೋರ್ಡ್‌ಗೆ
3. ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಧಾರವಾಡದ ನೋಟಿಸ್ ಬೋರ್ಡ್‌ಗೆ.
4. ಕಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಧಾರವಾಡದ ನೋಟಿಸ್ ಬೋರ್ಡ್‌ಗೆ
5. ಅಧ್ಯಕ್ಷರು, ವಕೀಲರ ಸಂಘ ಧಾರವಾಡ, ಇವರಿಗೆ & ಸದರಿ ಪ್ರಕಟಣೆಯನ್ನು ತಮ್ಮ ಸಂಘದ ನೋಟಿಸ್ ಬೋರ್ಡ್‌ಗೆ ಲಗತ್ತಿಸಲು ಕೋರಲಾಗಿದೆ.
6. ವಾರ್ತಾ ಇಲಾಖೆ, ಧಾರವಾಡ ಇವರಿಗೆ ಸದರಿ ಪ್ರಕಟಣೆಯನ್ನು ಸ್ಥಳೀಯ & ಪ್ರಮುಖ ಪತ್ರಿಕೆಗಳಲ್ಲಿ ಪತ್ರಿಕಾ ಪ್ರಕಟಣೆಗಾಗಿ.
7. ಕಛೇರಿಯ ಪ್ರತಿ.
8. ತಾಲೂಕು ಕಾನೂನು ಸೇವಾ ಸಮಿತಿ ಹಾಗೂ ವಕೀಲರ ಸಂಘ, ಹುಬ್ಬಳ್ಳಿ, ಕಲಘಟಗಿ, ಕುಂದಗೋಳ, ನವಲಗುಂದ – ಇವರ ಮಾಹಿತಿಗಾಗಿ.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಧಾರವಾಡ

ಎ.ಡಿ.ಆರ್. ಕಟ್ಟಡ, ದಿವಾಣಿ ನ್ಯಾಯಾಲಯಗಳ ಆವರಣ, ಪಿ.ಬಿ. ರಸ್ತೆ, ಧಾರವಾಡ – 580001

DISTRICT LEGAL SERVICES AUTHORITY, DHARWAD

ADR Building, Civil Court Premises, B.P.Road, Dharwad – 580 001.

Telephone: 0836 – 2740128 **E-mail ID:** dlsa.dwd2@gmail.com,

No.: DLSA Dwd: 940/2025 ದಿನಾಂಕ: 13/10/2025

ಪ್ರಕಟಣೆ

ಜಿಲ್ಲಾ ಮಧ್ಯಸ್ಥಿಕೆ ಕೇಂದ್ರ ಹಾಗೂ ತಾಲೂಕು ಮಧ್ಯಸ್ಥಿಕೆ ಕೇಂದ್ರಗಳಲ್ಲಿ ಮಧ್ಯಸ್ಥಿಕೆಗಾರರಾಗಿ ಸೇವೆ ಸಲ್ಲಿಸಲು ಅರ್ಹ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳುವ ಕುರಿತು.

ಪ್ರಕಟಣೆ ನಂ. ಜಿ.ಕಾ.ಸೇ.ಪ್ರಾ/ಮಧ್ಯಸ್ಥಿಕೆ/ನೇಮಕಾತಿ/24 /2025 ದಿನಾಂಕ: 13–10–2025

ಜಿಲ್ಲಾ ಮಧ್ಯಸ್ಥಿಕೆ ಕೇಂದ್ರ ಹಾಗೂ ತಾಲೂಕು ಮಧ್ಯಸ್ಥಿಕೆ ಕೇಂದ್ರಗಳಲ್ಲಿ ಮಧ್ಯಸ್ಥಿಕೆಗಾರರಾಗಿ ಸೇವೆ ಸಲ್ಲಿಸಲು **"ಮಧ್ಯಸ್ಥಿಕೆ ಕೇಂದ್ರದ ಮಧ್ಯಸ್ಥಿಕೆಗಾರರನ್ನಾಗಿ"** ನೇಮಕ ಮಾಡಿಕೊಳ್ಳಲು ಪ್ರಕಟಣೆಯನ್ನು ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸುವ ಕುರಿತು.

ನೇಮಕಾತಿ ವಿಧಾನ:–

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ನವದೆಹಲಿ ಇವರ ನಿರ್ದೇಶನದಂತೆ Mediation and Conciliation Project Committee, New Delhi, Mediation Rules – 2025 (MCPC)ರ ಅಡಿ ಜಿಲ್ಲಾ ಮಧ್ಯಸ್ಥಿಕೆ ಕೇಂದ್ರ ನೇಮಕಾತಿ ಪ್ರಾಧಿಕಾರದ ಮುಖ್ಯಸ್ಥರಾದ ಗೌರವಾನ್ವಿತ ಅಧ್ಯಕ್ಷರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಧಾರವಾಡರವರ ಅಧ್ಯಕ್ಷತೆಯಲ್ಲಿ.

ಅರ್ಹತೆಗಳು:–

1. ಮಧ್ಯಸ್ಥಿಕೆ ಕೇಂದ್ರದ ಮಧ್ಯಸ್ಥಿಕೆಗಾರರನ್ನಾಗಿ ನೇಮಕ ಮಾಡಿಕೊಳ್ಳಲು ವಕೀಲರಿಗೆ 15 ವರ್ಷಗಳ ಕಾನೂನು ವೃತ್ತಿಯನ್ನು ಮಾಡಿರುವುದು ಕಡ್ಡಾಯ.
2. ಮಧ್ಯಸ್ಥಿಕೆ ಕೇಂದ್ರದ ಮಧ್ಯಸ್ಥಿಕೆಗಾರರಾಗಿ ಸೇವೆ ಸಲ್ಲಿಸಲು ಆಸಕ್ತಿ ಹೊಂದಿದ ನಿವೃತ್ತ ನ್ಯಾಯಾಧೀಶರು, ನಿವೃತ್ತ ಸೈನಿಕರು, ನಿವೃತ್ತ ಇನ್ಸೂರೆನ್ಸ್ ಕಂಪನಿಯ ಹಿರಿಯ ಅಧಿಕಾರಿಗಳು, ನಿವೃತ್ತ ಬ್ಯಾಂಕ್ ಅಧಿಕಾರಿಗಳು, ನಿವೃತ್ತ ಪ್ರಾಧ್ಯಾಪಕರು ಹಾಗೂ ಶಿಕ್ಷಕರು, ವೈದ್ಯರು ಅರ್ಜಿಯನ್ನು ಸಲ್ಲಿಸಲು ಅವಕಾಶವಿರುತ್ತದೆ.

ಅರ್ಜಿದಾರರಿಗೆ ಸಾಮಾನ್ಯ ಸೂಚನೆಗಳು:-

1. ಮಧ್ಯಸ್ಥಿಕೆ ಕೇಂದ್ರದ ಮಧ್ಯಸ್ಥಿಕೆಗಾರರಾಗಿ ಸೇವೆ ಸಲ್ಲಿಸಲು ಇಚ್ಛೈಯಿರುವ ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ/ ತಾಲೂಕು ಕಾನೂನು ಸೇವಾ ಸಮಿತಿಗಳ ಕಛೇರಿಗಳಲ್ಲಿ ಪಡೆದುಕೊಳ್ಳಬಹುದು ಅಥವಾ ಧಾರವಾಡ ಜಿಲ್ಲಾ ನ್ಯಾಯಾಲಯದ ವೆಬ್‌ಸೈಟ್‌ನಲ್ಲಿ ಅರ್ಜಿಯನ್ನು ಪಡೆದುಕೊಳ್ಳಲು ಅವಕಾಶವಿರುತ್ತದೆ.
2. ಅಭ್ಯರ್ಥಿಗಳು ಭರ್ತಿಮಾಡಿದ ಅರ್ಜಿಯನ್ನು ದಿನಾಂಕ: 28-10-2025 ಸಂಜೆ 05.30 ಗಂಟೆಯ ಒಳಗಾಗಿ ಸಲ್ಲಿಸುವುದು, ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
3. ಅಭ್ಯರ್ಥಿಗಳು ಭರ್ತಿಮಾಡಿದ ನಿಗದಿತ ನಮೂನೆಯೊಂದಿಗೆ ಕಾನೂನು ಪದವಿ ಅಂಕಪಟ್ಟಿಗಳ ದೃಢೀಕೃತ ದಾಖಲಾತಿಗಳು, ಆಧಾರ ಕಾರ್ಡನ ಪ್ರತಿ, ಅಭ್ಯರ್ಥಿ ನೊಂದಣಿ ಮಾಡಿಕೊಂಡ ವಕೀಲರ ಸಂಘದಿಂದ ವೃತ್ತಿಯ ಅನುಭವದ ಪ್ರಮಾಣ ಪತ್ರ, ಕರ್ನಾಟಕ ರಾಜ್ಯ ವಕೀಲರ ಪರಿಷತ್‌ನಿಂದ ಪಡೆದುಕೊಂಡ ಪ್ರಮಾಣ ಪತ್ರವನ್ನು, ಜಾತಿ ಪ್ರಮಾಣ ಪತ್ರವನ್ನು ಹಾಗೂ ಪಾಸ್‌ಪೋರ್ಟ ಅಳತೆಯ ಭಾವಚಿತ್ರವನ್ನು ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸುವುದು.
4. ನ್ಯಾಯವಾದಿಗಳನ್ನು ಹೊರತು ಪಡಿಸಿ ಮಧ್ಯಸ್ಥಿಕೆಗಾರರಾಗಿ ಸೇವೆ ಸಲ್ಲಿಸಲು ಅರ್ಜಿ ಸಲ್ಲಿಸುವ ಅರ್ಹ ಅಭ್ಯರ್ಥಿಗಳು ತಮ್ಮ ಪದವಿ ಪ್ರಮಾಣ ಪತ್ರಗಳ ದೃಢೀಕೃತ ಅಂಕ ಪಟ್ಟಿಗಳು, ಆಧಾರ ಕಾರ್ಡ ಹಾಗೂ ತಾವು ಸೇವೆ ಸಲ್ಲಿಸುತ್ತಿರುವ ವೃತ್ತಿಯ ಇತರೆ ದೃಢೀಕೃತ ಪ್ರಮಾಣ ಪತ್ರಗಳನ್ನು ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸುವುದು.
5. ಅಭ್ಯರ್ಥಿಗಳು ಸಾಮಾನ್ಯ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವುದು ಹಾಗೂ ಅನುಸರಿಸುವುದರೊಂದಿಗೆ ಅರ್ಜಿಯನ್ನು ಸಲ್ಲಿಸುವುದು.
6. ಅಭ್ಯರ್ಥಿಗಳು ಅರ್ಜಿ ನಮೂನೆಯಲ್ಲಿ ಚಾಲ್ತಿ ಇರುವ ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ವಿಳಾಸವನ್ನು ಕಡ್ಡಾಯವಾಗಿ ನಮೂದಿಸುವುದು.
7. ಪ್ರಾಧಿಕಾರದ ಮಧ್ಯಸ್ಥಿಕೆಗಾರರನ್ನಾಗಿ ನೇಮಕಾತಿ ಮಾಡಿಕೊಳ್ಳಲು ನೇಮಕಾತಿ ಸಮಿತಿಯ ಅಧ್ಯಕ್ಷರ ನಿರ್ಣಯವೇ ಅಂತಿಮ.
8. ಅಭ್ಯರ್ಥಿಗಳು ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಜಿಲ್ಲಾ ನ್ಯಾಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಛೇರಿಯ ನೋಟಿಸ್ ಬೋರ್ಡನಲ್ಲಿ ಪ್ರಕಟಿಸಲಾಗುವುದು.
9. ಅರ್ಹ ಅಭ್ಯರ್ಥಿಗಳ ಸಂದರ್ಶನದ ಸಮಯ ಹಾಗೂ ಸ್ಥಳವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ಪ್ರಕಟಣೆಯ ಮುಖಾಂತರ ತಿಳಿಸಲಾಗುವುದು.

10. ಪ್ರಾಧಿಕಾರದ ಮಧ್ಯಸ್ಥಿಕೆದಾರರ ನೇಮಕಾತಿಯು ಅಭ್ಯರ್ಥಿಯ ಸಂಪೂರ್ಣ ಅರ್ಹತೆ ಮತ್ತು ತೃಪ್ತಿಯ ಪರೀಕ್ಷೆಯು ನೇಮಕಾತಿ ಸಮಿತಿಯ ನಿರ್ಣಯವಾಗಿರುತ್ತದೆ.

11. ಅರ್ಹ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಂಡ ನಂತರದಲ್ಲಿ ಪ್ರಾಧಿಕಾರ ಮಧ್ಯಸ್ಥಿಕೆದಾರರ ಕರ್ತವ್ಯ ನಿರ್ವಹಣೆಯಲ್ಲಿ ತೃಪ್ತಿಕರವಾಗಿರದ ಸಂದರ್ಭದಲ್ಲಿ ಅಂತಹ ಮಧ್ಯಸ್ಥಿಕೆದಾರರನ್ನು ಪ್ರಾಧಿಕಾರದಿಂದ ತೆಗದು ಹಾಕುವ ಸಂಪೂರ್ಣ ಅಧಿಕಾರ ನೇಮಕಾತಿ ಸಮಿತಿಗೆ ಇರುತ್ತದೆ.

12. ಪ್ರಾಧಿಕಾರದ ಮಧ್ಯಸ್ಥಿಕೆದಾರರಾಗಿ ಕಾರ್ಯನಿರ್ವಹಿಸಲು 03 ವರ್ಷಗಳ ಅವಧಿಗೆ ನೇಮಕಾತಿ ಮಾಡಿಕೊಳ್ಳಲಾಗುವುದು ಹಾಗೂ ಒಂದು ವೇಳೆ ಪ್ರಾಧಿಕಾರದ ಮಧ್ಯಸ್ಥಿಕೆದಾರರ ಕಾರ್ಯವೈಖರಿಯು ತೃಪ್ತಿಕರ ಹಾಗೂ ಸಮರ್ಪಕವಾಗಿರುವುದಿಲ್ಲ ಎಂದು ಕಂಡುಬಂದಲ್ಲಿ ಪ್ರಾಧಿಕಾರದ ಮಧ್ಯಸ್ಥಿಕೆದಾರರ ಕರ್ತವ್ಯದಿಂದ ಅವರನ್ನು ವಜಾಗೊಳಿಸುವ ಅಧಿಕಾರವನ್ನು ಪ್ರಾಧಿಕಾರವು ಹೊಂದಿರುತ್ತದೆ.

ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ
ಅಧ್ಯಕ್ಷರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಧಾರವಾಡರವರ ಆದೇಶದ ಮೇರೆಗೆ

14-10-25

ಪರಶುರಾಮ ಎಫ್. ದೊಡ್ಡಮನಿ
ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ಧಾರವಾಡ

MEMBER SECRETARY
District Legal Services Authority
Dharwad

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಧಾರವಾಡ

ಇತ್ತೀಚಿನ ಭಾವಚಿತ್ರ ಲಗತ್ತಿಸಿ

ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ
ಅಧ್ಯಕ್ಷರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ಧಾರವಾಡ – ಇವರಿಗೆ

ಮಧ್ಯಸ್ಥಿಕೆ ಕೇಂದ್ರದ ಮಧ್ಯಸ್ಥಿಕೆಗಾರರ ನೇಮಕಾತಿಗಾಗಿ ಅರ್ಜಿ

1	ಅರ್ಜಿದಾರರ ಹೆಸರು:	
2	ತಂದೆಯ/ ತಾಯಿಯ/ ಗಂಡನ ಹೆಸರು:	
3	ಜನ್ಮ ದಿನಾಂಕ, ವಯಸ್ಸು:	
4	ವಿಳಾಸ: ಅ) ಖಾಯಂ ವಿಳಾಸ: ಆ) ಕಛೇರಿ ವಿಳಾಸ:	
5	ಮೊಬೈಲ್ ನಂ:	
6	ಇ-ಮೇಲ್ ವಿಳಾಸ:	
7	ವಿದ್ಯಾರ್ಹತೆ:	
8	ಎನ್‌ರೋಲ್‌ಮೆಂಟ್ ನಂ: (ವಕೀಲರಿಗೆ ಮಾತ್ರ)	
9	ವಕೀಲ ವೃತ್ತಿಯ ಅನುಭವ: Criminal, Civil, Matrimonial Cases, NI Act Cases, Commercial Disputes etc.,	
10	ಯಾವ ವರ್ಗಕ್ಕೆ ಸೇರಿರುವಿರಿ: Advocates, Rtd. Judges, Ex-Servicemen, Senior Officers of Insurance Companies, Banking Institution, Rtd., Professors/ Teachers, Doctors	
11	ಜಾತಿ:	
12	ಇತರೆ ಮಾಹಿತಿ:	

ಕಾನೂನು ಸೇವೆಗಳ ಪ್ರಾಧಿಕಾರದ ನಿಯಮಗಳನ್ನು ತಿಳಿದಿದ್ದು, ಅವುಗಳಿಗೆ ನಾನು ಬದ್ಧನಾಗಿ ಅರ್ಜಿ ಸಲ್ಲಿಸುತ್ತಿದ್ದೇನೆ.

ಸ್ಥಳ:
ದಿನಾಂಕ: ಸಹಿ

ಅರ್ಜಿ ಸಲ್ಲಿಸಲು ನಿಬಂಧನೆಗಳು:

1. ವಕೀಲರ ವೃತ್ತಿಯಲ್ಲಿ ಕನಿಷ್ಠ 15 ವರ್ಷ ಅನುಭವ ಹೊಂದಿರಬೇಕು.
2. ಕರ್ನಾಟಕ ರಾಜ್ಯ ವಕೀಲರ ಪರಿಷತ್ತು, ಬೆಂಗಳೂರು ಇಲ್ಲಿ ನೋಂದಾವಣೆ ಆಗಿರುವ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ಲಗತ್ತಿಸಬೇಕು.
3. ಮಧ್ಯಸ್ಥಿಕೆ ಪ್ರಕರಣಗಳ ಸಂಧಾನ ಪ್ರಕ್ರಿಯೆಯಲ್ಲಿ ಕಾರ್ಯನಿರ್ವಹಿಸಿದಾಗ ನಿಯಮಾನುಸಾರ ಗೌರವಧನ ಪಾವತಿಸಲಾಗುವುದು.
4. ಕಾನೂನು ಸೇವೆಗಳ ಪ್ರಾಧಿಕಾರದ ನಿಯಮಗಳು/ ಮಧ್ಯಸ್ಥಿಕೆ ನಿಯಮ–2015 ಅನ್ನು ಕಡ್ಡಾಯವಾಗಿ ತಿಳಿದಿರಬೇಕು.
5. ಅರ್ಜಿಯ ಕಾಲಂ ನಂಬರ್ 10ಕ್ಕೆ ಸಂಬಂಧಪಟ್ಟ ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಬಹುದು.
6. ನಿಗದಿತ ದಿನಾಂಕದೊಳಗಾಗಿ ಕಛೇರಿಗೆ ಸಲ್ಲಿಸದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.